ಓ ಎಸ್ ನಂ. 78/2018
ಪಿ ಡಬ್ಲ್ಯೂಃ 1
ದಿನಾಂಕ 23-03-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಸಿ ಎಂ ಜಿ ವಕೀಲರಿಂದಃ

ನಾನು ದಾವೆಯನ್ನು ಜಮೀನಿನಲ್ಲಿ ಭಾಗ ಕೋರಿ ಸಲ್ಲಿಸಿರುತ್ತೇನೆ. ದಾವಾ ಆಸ್ತಿಗಳ ಸರ್ವೆ ನಂಬರು ಮತ್ತು ವಿಸ್ತೀರ್ಣ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳು ನನ್ನ ಮಾವನ ಹೆಸರಿನಲ್ಲಿರುತ್ತವೆ. ನನ್ನ ಮಾವನಿಗೆ ಅವರ ತಾತನ ಮೂಲಕ ಬಂದಿರುತ್ತದೆ. ಯಾವ ಯಾವ ಆಸ್ತಿಗಳು ನಿಮ್ಮ ಮಾವನಿಗೆ ಅವರ ತಾತನಿಂದ ಬಂದಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲಾ ಆಸ್ತಿಗಳು ಅವರ ತಾತನಿಂದಲೇ ಬಂದಿದೆ ಎಂದು ನುಡಿದಿರುತ್ತಾರೆ. ನನ್ನ ಮಗಳಿಗೆ ಈಗ 5 ವರ್ಷ 10 ತಿಂಗಳು ಆಗಿರುತ್ತದೆ. ಸಾಕ್ಷಿ ಮುಂದುವರೆದು ಜೂನ್ ಬಂದರೆ 6 ವರ್ಷ ಆಗುತ್ತದೆ ಎಂದು ನುಡಿದಿರುತ್ತಾರೆ.

ನನ್ನ ಮದುವೆಯು ದಿನಾಂಕ 26/08/2011 ರಂದು ಆಗಿರುತ್ತದೆ. ನನ್ನ ಮದುವೆಯಾದ ಐದು ವರ್ಷಗಳ ನಂತರ ಮಗುವಾಗಿರುತ್ತದೆ. ನಾನು ಮತ್ತು ನನ್ನ ಗಂಡ ದೂರವಾಗಿ ಸುಮಾರು ಆರೂವರೆ ವರ್ಷಗಳಾಗಿರಬಹುದು. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1 ನೇ ಪ್ರತಿವಾದಿಯ

ಸ್ವಯಾರ್ಜಿತ ಮತ್ತು ಅವರ ಹೆಂಡತಿ ಮನೆಯಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ಮಗಳಾದ ವಾದಿ ನನ್ನ ಮತ್ತು 5ನೇ ಪ್ರತಿವಾದಿಯ ಮಗುವಲ್ಲ ಎಂದರೆ ಸರಿಯಲ್ಲ. ಆದ ಕಾರಣ ದಾವಾ ಆಸ್ತಿಗಳಲ್ಲಿ ನನ್ನ ಮಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಡಿ ಎನ್ ಎ ಪರೀಕ್ಷೆ ಮಾಡಿಸಲು ನನ್ನ ತಕರಾರು ಇರುವುದಿಲ್ಲ, ಒಪ್ಪಿಗೆ ಇದೆ.

ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.